I/114750/2021

ಕರ್ನಾಟಕ ಸರ್ಕಾರ

ಸಂ:ಆಇ 01 ಟಿಎಫ್‌ಪಿ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ:03-08-2021.

ಸುತ್ತೋಲೆ

**ವಿಷಯ**:- ಹಿಂದಿನ ಆರ್ಥಿಕ ವರ್ಷದ / ವರ್ಷಗಳ ವೇತನ ಬಾಕಿಯನ್ನು ಸೆಳೆಯಲು ಆರ್ಥಿಕ ಇಲಾಖೆಯ ಸಹಮತಿ ಪಡೆಯುವ ಬಗ್ಗೆ.

*********

ಪ್ರತಿ ಆರ್ಥಿಕ ಸಾಲಿನಲ್ಲಿ ಆಯವ್ಯಯ ಅಂದಾಜುಗಳನ್ನು ಇಲಾಖೆಗಳಿಂದ ಮಂಜೂರಾದ ಹುದ್ದೆಗಳಿಗೆ ದೃಢೀಕರಣ ಪಡೆದು ಹಾಗೂ HRMS ನಿಂದ ಕಾರ್ಯನಿರತ ಹುದ್ದೆಗಳ ವಿವರಗಳನ್ನು ಪಡೆದು ವೇತನ ಅಂದಾಜಿಸಲಾಗುತ್ತಿದೆ.

ಆದರೆ, ವರ್ಷದ ಮಧ್ಯದಲ್ಲಿ ಹುದ್ದೆಗಳು ಭರ್ತಿ ಆಗುವುದರಿಂದ, ನ್ಯಾಯಾಲಯದ ಆದೇಶದಂತೆ ವೇತನ ಹಿಂಬಾಕಿ ನೀಡಬೇಕಾಗುವುದರಿಂದ ಮತ್ತಿತರ ಕಾರಣಗಳಿಂದ, ಪ್ರಸ್ತುತ ವರ್ಷದಲ್ಲಿ ಬಾಕಿ ವೇತನ ಸೆಳೆದಲ್ಲಿ ಈ ವರ್ಷದ ವೇತನ ಸೆಳೆಯಲು ಕೊರತೆಯಾಗುತ್ತದೆ.

ಸರ್ಕಾರದ ಸುತ್ತೋಲೆ ಸಂ:ಆಇ 6 ಬಿಪಿಇ 2019, ದಿ:3.01.2021 ರಲ್ಲಿ ಪ್ರತಿ ಆರ್ಥಿಕ ಸಾಲಿನಲ್ಲಿ ಆ ವರ್ಷದ ವೇತನವನ್ನು ಮುಂದಿನ ಆರ್ಥಿಕ ಸಾಲಿಗೆ ಮುಂದೂಡದೆ, ಅದೇ ಆರ್ಥಿಕ ಸಾಲಿನಲ್ಲಿ ಸೆಳೆಯಲು ತಿಳಿಸಲಾಗಿದೆ. ಆದಾಗ್ಯೂ, ಕೆಲವು ಇಲಾಖೆಗಳು ಈ ವರ್ಷ ಒದಗಿಸಿದ ಅನುದಾನದಲ್ಲಿ ಹಿಂದಿನ ಸಾಲುಗಳ ಬಾಕಿ ವೇತನಗಳನ್ನು ಸೆಳೆಯುತ್ತಿರುವುದರಿಂದ ಪ್ರಸ್ತುತ ಆರ್ಥಿಕ ಸಾಲಿನಲ್ಲಿ ವೇತನ ಸೆಳೆಯಲು ಅನುದಾನ ಕೊರತೆಯಾಗುತ್ತಿದೆ.

ಆದುದರಿಂದ, ಎಲ್ಲಾ ಇಲಾಖೆಗಳು ವೇತನಕ್ಕೆ ಸಂಬಂಧಿಸಿದಂತೆ ಬಾಕಿಗಳನ್ನು ಸೆಳೆಯಬೇಕಾದಲ್ಲಿ ಆರ್ಥಿಕ ಇಲಾಖೆಗೆ ವಿವರಣೆ ಹಾಗೂ ಸೂಕ್ತ ಸಮರ್ಥನೆಯೊಂದಿಗೆ ಪ್ರಸ್ತಾವನೆ ಸಲ್ಲಿಸಿ ಆರ್ಥಿಕ ಇಲಾಖೆಯ ನಿರ್ದಿಷ್ಟ ಅನುಮೋದನೆ ಪಡೆದುಕೊಂಡು ಬಾಕಿ ವೇತನಗಳನ್ನು ಸೆಳೆಯತಕ್ಕದೆಂದು ಈ ಮೂಲಕ ತಿಳಿಸಲಾಗಿದೆ. ಇಲ್ಲವಾದಲ್ಲಿ ಖಜಾನೆಯು ಹಿಂದಿನ ವರ್ಷಗಳ ಬಾಕಿ ವೇತನ ಸೆಳೆಯಲು ಅನುವು ಮಾಡತಕ್ಕದ್ದಲ್ಲವೆಂದು ತಿಳಿಸಲಾಗಿದೆ.

Signed by Shobha Ha
Date: 03-08-2021 17:48:48
(ಹೆಚ್.ಎ. ಶೋಭ)
ಸರ್ಕಾರದ ಉಪ ಕಾರ್ಯದರ್ಶಿ(ಆನಿ ಮತ್ತು ಬಿಸಿಸಿ)
ಆರ್ಥಿಕ ಇಲಾಖೆ

ಪ್ರತಿಗಳು:-

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369 ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.

3. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ/ಕಾರ್ಯದರ್ಶಿಗಳು.
5. ಖಜಾನೆ ಆಯುಕ್ತರು, 6ನೇ ಮಹಡಿ, ಕೆ.ಪಿ.ಸಿ.ಎಲ್., ಗ್ರೀನ್ ಕಟ್ಟಡ, ಔಷಧ ನಿಯಂತ್ರಣ ಆವರಣ, ಬೆಂಗಳೂರು-560001.
6. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
7. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು.
8. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು – ಖಜಾನೆ ಆಯುಕ್ತರ ಮುಖಾಂತರ.
9. ಆರ್ಥಿಕ ಇಲಾಖೆಯ ಅಪರ/ವಿಶೇಷ/ಜಂಟಿ/ಉಪ ಕಾರ್ಯದರ್ಶಿ/ಅಧೀನ/ಶಾಖಾಧಿಕಾರಿಗಳಿಗೆ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.